
**14** ಕಾಳಿದಾಸ ಚರಮಗೀತೆಯನ್ನು ಹಾಡುತ್ತಿದ್ದಾಗ ವೇಷ ಮರೆಸಿಕೊಂಡಿದ್ದ ರಾಜ ಕ್ರಮೇಣ ಪ್ರಜ್ಞೆ ಕಳೆದುಕೊಂಡ. ಬೀಳುತ್ತಿದ್ದ ಅವನನ್ನು ಕಾಳಿದಾಸ ಹಿಡಿದುಕೊಂಡ.




**15** ಕಾಳಿದಾಸ ಸರಸ್ವತಿಯನ್ನು ಪ್ರಾರ್ಥಿಸಿದ. ಸರಸ್ವತಿ ಅವನ ಮುಂದೆ ಪ್ರತ್ಯಕ್ಷಳಾದಳು.




**16** ಸರಸ್ವತಿಯ ಅನುಗ್ರಹದಂತೆ ಭೋಜರಾಜ ಜೀವಂತನಾದ.




**17**

ಅವರಿಬ್ಬರೂ ಒಂದು ರಾಮಾಯಣ ಕಾವ್ಯವನ್ನು ರಚಿಸಿದರು. ಪರೀಕ್ಷಿತ ರಾಜನು ತನ್ನ ಕೊನೆಯ ದಿನಗಳಲ್ಲಿ ಏಳು ದಿನ ಭಾಗವತದ ಶ್ರವಣ ಮಾಡಿದ. ಆದರೆ ಭೋಜರಾಜ ತನಗೆ ಒದಗಿದ ಅಲ್ಪಾಯಸ್ಸಿನ ಅವಧಿಯಲ್ಲಿ ಕಾಳಿದಾಸನ ಸಹಾಯದಿಂದ ಎಲ್ಲರಿಗೂ ಹಿತವನ್ನುಂಟುಮಾಡುವ ರಾಮಾಯಣವನ್ನು ರಚಿಸಿದ. ಅದರ ಹೆಸರು '**ಚಂಪೂರಾಮಾಯಣ.**' ಅದು ಕಾಳಿದಾಸನ ಹಾಗೂ ಭೋಜರಾಜನ ಸ್ನೇಹವನ್ನು ಹಾಗೂ ಅವರ ಕಾವ್ಯದ ಹಿರಿಮೆಯನ್ನು ತೋರಿಸಿಕೊಡುತ್ತದೆ. ಅಂತೆಯೇ ಅದು ಅವರಿಗಿದ್ದ ಜನಹಿತವನ್ನು ಉಂಟುಮಾಡುವ ಮನೋಭಾವವನ್ನೂ ಸೂಚಿಸುತ್ತದೆ.